# ಕರ್ನಾಟಕ ಸರ್ಕಾರ

ಕೃಇ 09 ಕೃಉಇ 2019 (ಭಾಗ-3)

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ: 27-02-2019

## ಸುತ್ತೋಲೆ

**ವಿಷಯ:-** ಪ್ರಧಾನ ಮಂತ್ರಿ ಕಿಸಾನ್ (Pradhan Mantri KIsan SAmman Nidhi PM-KISAN) ಯೋಜನೆ ಅಡಿ ಜಂಟಿ ಮಾಲೀಕರನ್ನು ಪರಿಗಣಿಸುವ ಬಗ್ಗೆ.

**ಉಲ್ಲೇಖ:** ಭಾರತ ಸರ್ಕಾರದ ಅರೆ ಸರ್ಕಾರಿ ಪತ್ರ ಸಂಖ್ಯೆ: JS/PM KISAN/05/2019 Dated: 19-02-2019

******

ಭಾರತ ಸರ್ಕಾರವು ಪ್ರಧಾನ ಮಂತ್ರಿ ಕಿಸಾನ್ (Pradhan Mantri KIsan SAmman Nidhi PM-KISAN) ಯೋಜನೆಯನ್ನು ಪ್ರಾರಂಭಿಸಿರುತ್ತದೆ. ಯೋಜನೆಯಡಿಯಲ್ಲಿ 2 ಹೆಕ್ಟೇರ್‌ಗಿಂತ ಕಡಿಮೆ ಭೂ ಒಡೆತನ ಹೊಂದಿರುವ ಪ್ರತಿ ಸಣ್ಣ ರೈತ ಕುಟುಂಬವು ಒಂದು ವರ್ಷಕ್ಕೆ ರೂ. 6000/- ಗಳನ್ನು ಪಡೆಯಬಹುದು. ಜಂಟಿ ಭೂ ಮಾಲೀಕತ್ವ ಹೊಂದಿರುವ ಕುರಿತು ಭಾರತ ಸರ್ಕಾರವು ಮೇಲೆ ಓದಲಾದ ಪತ್ರದಲ್ಲಿ ಸ್ಪಷ್ಟೀಕರಣವನ್ನು ಒದಗಿಸಿರುತ್ತದೆ. ಅದರಂತೆ ಅರ್ಹ ಫಲಾನುಭವಿಗಳನ್ನು ಪಿ. ಎಮ್. ಕಿಸಾನ್ ಯೋಜನೆಯಡಿಯಲ್ಲಿ ಪರಿಗಣಿಸುವಾಗ ಕೆಳಕಂಡ ತತ್ವಗಳನ್ನು/ ಷರತ್ತುಗಳನ್ನು ಅನುಸರಿಸಲು ಸೂಚನೆ ನೀಡಲಾಗಿದೆ.

1. ಜಂಟಿ ಹಿಡುವಳಿ ಅಥವಾ ಜಂಟಿ ಮಾಲೀಕರು ಎಂದರೆ ಪ್ರತಿಯೊಬ್ಬ ವ್ಯಕ್ತಿಯ ಕುಟುಂಬ ಅಂದರೆ ಪತಿ / ಪತ್ನಿ ಮತ್ತು ಅವರ ಅಪ್ರಾಪ್ತ ಮಕ್ಕಳನ್ನು ಒಳಗೊಂಡ ಕುಟುಂಬಕ್ಕೆ ಒಳಪಡುವ ಭೂಮಿಯ ವಿಸ್ತೀರ್ಣ 2 ಹೆಕ್ಟೇರ್‌ನ (5 ಎಕರೆ) ಗರಿಷ್ಠ ಮಿತಿಗೆ ಒಳಪಟ್ಟಿರತಕ್ಕದ್ದು.

2. ಜಂಟಿ ಮಾಲೀಕರ ವಿಷಯದಲ್ಲಿ ಪ್ರತಿಯೊಬ್ಬ ಮಾಲೀಕರು ಸಮನಾಗಿ ಭೂಮಿ ಹೊಂದಿದ್ದಾರೆಂದು ಪರಿಗಣಿಸಬಹುದು. **ಉದಾ:** ಒಂದು ವೇಳೆ ಇಬ್ಬರು ಜಂಟಿ ಹಿಡುವಳಿ 2 ಎಕರೆಗಳನ್ನು ಹೊಂದಿದ್ದರೆ, ಪ್ರತಿ ಒಬ್ಬರಿಗೆ 1 ಎಕರೆಯಂತೆ (ಒಟ್ಟು ಹಿಡುವಳಿಯ ಅರ್ಧದಷ್ಟು ಭೂಮಿ) ಮತ್ತು ಒಂದು ವೇಳೆ ಮೂವರು ಜಂಟಿ ಹಿಡುವಳಿ 3 ಎಕರೆಗಳನ್ನು ಹೊಂದಿದ್ದರೆ, ಪ್ರತಿ ಒಬ್ಬರಿಗೆ 1 ಎಕರೆಯಂತೆ (ಒಟ್ಟು ಹಿಡುವಳಿಯ 1/3 ರಷ್ಟು).

3. ಈ ರೀತಿ ಪರಿಗಣಿಸಿ, ಪ್ರತಿ ಜಂಟಿ ಮಾಲೀಕನೂ ಪಿ. ಎಮ್. ಕಿಸಾನ್ ಯೋಜನೆಯಡಿಯಲ್ಲಿ ಆತನ/ಅವರ ಕುಟುಂಬವು 2 ಹೆಕ್ಟೇರ್‌ಗಿಂತ ಕಡಿಮೆ ಭೂ ಒಡೆತನ ಹೊಂದಿದ್ದಲ್ಲಿ ಅವರು ಅರ್ಹ ಫಲಾನುಭವಿಯಾಗಿರುತ್ತಾರೆ.

ಅನುಷ್ಠಾನಾಧಿಕಾರಿಗಳು ಈ ತತ್ವಗಳನ್ನು ಪಿ. ಎಮ್. ಕಿಸಾನ್ ಯೋಜನೆಯಡಿಯಲ್ಲಿ ಅರ್ಹ ಫಲಾನುಭವಿಗಳನ್ನು ಪರಿಗಣಿಸಲು ಅನುಸರಿಸುವುದು. ಉಳಿದ ಎಲ್ಲಾ ಷರತ್ತುಗಳು ಮತ್ತು ನಿಬಂಧನೆಗಳು ಭಾರತ ಸರ್ಕಾರ ಹಾಗೂ ರಾಜ್ಯ ಸರ್ಕಾರದ ಮಾರ್ಗಸೂಚಿಯಂತೆ ಇರುತ್ತದೆ.

B S Nagarathnamma

(ಬಿ.ಎಸ್.ನಾಗರತ್ನಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ (ಯೋಜನೆ).

27/02/19

**ಇವರಿಗೆ:**

1. ಕೃಷಿ ಆಯುಕ್ತರು,/ಕೃಷಿ ನಿರ್ದೇಶಕರು, ಶೇಷಾದ್ರಿ ರಸ್ತೆ, ಬೆಂಗಳೂರು.
2. ಆಯುಕ್ತರು, ತೋಟಗಾರಿಕೆ ಇಲಾಖೆ, ಬೆಂಗಳೂರು.

3. ಆಯುಕ್ತರು, ರೇಷ್ಮೆ ಇಲಾಖೆ ಬೆಂಗಳೂರು.
4. ಡೆಪ್ಯುಟಿ ಡೈರೆಕ್ಟರ್ ಜನರಲ್ & ಸ್ಟೇಟ್ ಇನ್ಫರ್ಮ್ಯಾಟಿಕ್ಸ್ ಆಫೀಸರ್, ಬೆಂಗಳೂರು.
5. ರಾಜ್ಯ ಮಟ್ಟದ ಬ್ಯಾಂಕರ್ಸ್ ಸಮಿತಿ ಸದಸ್ಯರು ಬೆಂಗಳೂರು. (ಕೃಷಿ ಆಯುಕ್ತರ ಮುಖಾಂತರ)
6. ವ್ಯವಸ್ಥಾಪಕ ನಿರ್ದೇಶಕರು, ಅಪೆಕ್ಸ್ ಬ್ಯಾಂಕ್, ಬೆಂಗಳೂರು.
7. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು. } (ಕೃಷಿ ಆಯುಕ್ತರ ಮುಖಾಂತರ)
8. ಎಲ್ಲಾ ಜಿಲ್ಲೆಗಳ ಜಂಟಿ ಕೃಷಿ ನಿರ್ದೇಶಕರು.
9. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.
10. ಜಂಟಿ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
11. ನಿರ್ದೇಶಕರು, TNMC, ಖನಿಜ ಭವನ ಬೆಂಗಳೂರು.
12. ಸರ್ಕಾರದ ಅಧೀನ ಕಾರ್ಯದರ್ಶಿ (ವೆಚ್ಚ– 4&5), ಆರ್ಥಿಕ ಇಲಾಖೆ, ಬೆಂಗಳೂರು
13. ಆಂತರಿಕ ಆರ್ಥಿಕ ಸಲಹೆಗಾರರು ಕೃಷಿ ಮತ್ತು ತೋಟಗಾರಿಕೆ ಇಲಾಖೆ, ಬೆಂಗಳೂರು
14. ಶಾಖೆಯ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

**ಮಾಹಿತಿಗಾಗಿ:–**

15. ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು.
16. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು, ವಿಧಾನಸೌಧ, ಬೆಂಗಳೂರು.
17. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಇ–ಆಡಳಿತ) ಬೆಂಗಳೂರು.
18. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ. ಬೆಂಗಳೂರು.
19. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ, ಸಹಕಾರ ಇಲಾಖೆ. ಬೆಂಗಳೂರು.
20. ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಕಂದಾಯ ಇಲಾಖೆ, ಬೆಂಗಳೂರು
21. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬೆಂಗಳೂರು.
22. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ಬೆಂಗಳೂರು.
23. ಸರ್ಕಾರದ ಕಾರ್ಯದರ್ಶಿ, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ, ಬೆಂಗಳೂರು.
24. ಆಯುಕ್ತರು, ಭೂಮಾಪನ, ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ, ಬೆಂಗಳೂರು.